ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE 3/9/2020

# ಪ್ರಶ್ನೋತ್ತರ ಅವಧಿಯೇ ರದ್ದು

## ಸರಕಾರದ ನಿರ್ಧಾರಕ್ಕೆ ಪ್ರತಿಪಕ್ಷ ನಾಯಕರ ತೀವ್ರ ಆಕ್ರೋಶ

**ಹೊಸದಿಲ್ಲಿ:** ಕೊರೊನಾ ಸಾಂಕ್ರಾಮಿಕದ ನಡುವೆಯೂ
ಸೆ.14ರಿಂದ ಅ.1ರವರೆಗೂ ಸಂಸತ್ ಮುಂಗಾರು ಅಧಿ
ವೇಶನದಲ್ಲಿ ಪ್ರಶ್ನೋತ್ತರ ಅವಧಿಯನ್ನು ರದ್ದುಗೊಳಿಸ
ಲಾಗಿದೆ. ಇದು ಸರಕಾರ ಮತ್ತು ಪ್ರತಿಪಕ್ಷಗಳ ನಡುವೆ
ಮತ್ತೊಂದು ಸುತ್ತಿನ ವಾಕ್ಸಮರಕ್ಕೆ ದಾರಿ ಮಾಡಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ತೃಣಮೂಲ ಕಾಂಗ್ರೆಸ್
ಸಂಸದ ಡೆರೆಕ್ ಒಬ್ರಿಯಾನ್, ''1950ರ ನಂತರ ಇದೇ
ಮೊದಲ ಬಾರಿ ಪ್ರತಿ ಪಕ್ಷಗಳ ಸಂಸದರು ಸರಕಾರವನ್ನು
ಪ್ರಶ್ನಿಸುವ ಹಕ್ಕು ಕಳೆದುಕೊಳ್ಳಲಿದ್ದಾರೆ. ಅಧಿವೇಶನವನ್ನೇ
ನಡೆಸಲು ನಿರ್ಧರಿಸಿರುವಾಗ ಪ್ರಶ್ನೋತ್ತರ ಅವಧಿ
ಯನ್ನು ಮಾತ್ರ ಏಕೆ ರದ್ದುಗೊಳಿಸಬೇಕು?
ಪ್ರಜಾಪ್ರಭುತ್ವವನ್ನು ಹತ್ಯೆಗೈಯ್ಯಲು ಸಾಂಕ್ರಾಮಿಕದ
ನೆಪ ಒಡ್ಡಲಾಗಿದೆ,'' ಎಂದು ಕಿಡಿಕಾರಿದ್ದಾರೆ.

ಈ ವಿಚಾರವಾಗಿ ಸ್ಪೀಕರ್ ಓಂ ಬಿರ್ಲಾ ಅವರಿಗೆ
ಪತ್ರ ಬರೆದಿರುವ ಕಾಂಗ್ರೆಸ್ ಮುಖಂಡ ಅಧೀರ್
ರಂಜನ್ ಚೌಧರಿ ಅವರು ''ಪ್ರಶ್ನೋತ್ತರ ಅವಧಿಯನ್ನು
ರದ್ದುಗೊಳಿಸುವ ನಿರ್ಧಾರವನ್ನು ಖಂಡಿಸಿದ್ದಾರೆ.
''ಪ್ರಶ್ನೋತ್ತರ ಅವಧಿ ರದ್ದುಗೊಳಿಸುವ ನಿರ್ಧಾರವನ್ನು
ಮರುಪರಿಶೀಲಿಸುವಂತೆ ನಾವು ಸರಕಾರಕ್ಕೆ ಮನವಿ
ಮಾಡುತ್ತೇವೆ,'' ಎಂದು ಚೌಧರಿ ಹೇಳಿದ್ದಾರೆ. ''ಇಡೀ
ಅಧಿವೇಶನದಲ್ಲಿ ಪ್ರಶ್ನೋತ್ತರ ಅವಧಿಯನ್ನು ರದ್ದುಗೊಳಿ



### 1952ರ ಬಳಿಕ ಮೊದಲ ಬಾರಿ

**1952ರ ಮೇ 13ರಂದು ಮೊದಲ ಬಾರಿಗೆ ಅಧಿವೇಶನ ಸೇರಿದಾಗ ಮೇ 26ರವರೆಗೂ ಪ್ರಶ್ನೋತ್ತರ ಅವಧಿಗೆ ಅವಕಾಶ ಕಲ್ಪಿಸಿರಲಿಲ್ಲ. ಆಗಲೂ ಪ್ರತಿಪಕ್ಷಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದವು. ಆಕ್ರೋಶಕ್ಕೆ ಮಣಿದ ಸಭಾಧ್ಯಕ್ಷರು ಮೇ 26ರ ಬಳಿಕ ಪ್ರಶ್ನೋತ್ತರ ಅವಧಿ ನಡೆಸಲು ಅವಕಾಶ ಕಲ್ಪಿಸಿದರು.**

**ಸರಕಾರ ಚರ್ಚೆಯಿಂದ ಹಿಂದೆ ಸರಿಯುವುದಿಲ್ಲ, ಪ್ರಶ್ನೆಗಳಿಗೆ ಲಿಖಿತ ಉತ್ತರಗಳನ್ನು ನೀಡಲಾಗುತ್ತದೆ.**

**-ಪ್ರಹ್ಲಾದ ಜೋಶಿ**

ಸಂಸದೀಯ ವ್ಯವಹಾರಗಳ ಸಚಿವರು

ಸುವ ಬಿಜೆಪಿ ಸರಕಾರದ ನಿರ್ಧಾರದಿಂದ ''ಚುನಾ
ಯಿತ ಪ್ರತಿನಿಧಿಗಳಿಗೂ ಸಹ ಸರಕಾರವನ್ನು ಪ್ರಶ್ನಿಸುವ
ಹಕ್ಕಿಲ್ಲ ಎಂಬ ಸ್ಪಷ್ಟ ಸಂದೇಶ ರವಾನೆಯಾಗಿದೆ,''
ಎಂದು ಸಂಸದೆ ಕನ್ನಿಮೋಳಿ ಟ್ವೀಟ್ ಮಾಡಿದ್ದಾರೆ.